ತೀರ್ಮಾನವಾಗಬೇಕು. ಅಲ್ಲಿ ತೀರ್ಮಾನವಾಗಿ ನಂತರ ನಮಗೆ ಬರಬೇಕು. ಅಲ್ಲಿ ತೀರ್ಮಾನವಾದ .ನಂತರ ನಮಗೆ ಬರುತ್ತದೆ. ಅಲ್ಲಿಯವರೆಗೆ ಬರುವುದಿಲ್ಲ. ಆದ್ದರಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಬೀದರ್ ಹಿಂದುಳಿದ ಪ್ರದೇಶವಾಗಿರುವುದರಿಂದ ಈಗಲಾದರೂ ಅಲ್ಲಿ ಕಾಲೇಜು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ? ಇದರ ಬಗ್ಗೆ ಯೋಚನೆ ಮಾಡುತ್ತೀರಾ ಎಂಬ ಬಗ್ಗೆ ಖಚಿತವಾಗಿ ಹೇಳಿ.

ಶ್ರೀ ಹೆಚ್.ಎಂ. ರೇವಣ್ಣ : ಹೊಸ ವಿಚಾರ ಹೇಳಿದ್ದೀರಿ. ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿಮ್ಮ ಸರ್ಕಾರದಲ್ಲಿ ಮಾಡುತ್ತೀರಾ ಹೇಳಿ.

ಶ್ರೀ ಹೆಚ್. ಎಂ. ರೇವಣ್ಣ : ನಿಮ್ಮ ಸರ್ಕಾರದಲ್ಲಿ ಮಾಡಿಲ್ಲ. ನಮ್ಮ ಸರ್ಕಾರದಲ್ಲಿ ಮಾಡುವುದನ್ನು ಪರಿಶೀಲನೆ ಮಾಡುತ್ತೇವೆ.

ರಾಜ್ಯದಲ್ಲಿ ಶೀಥಲ ಗೃಹಗಳ ಸ್ಥಾಪನೆ

83 - ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಮ್ಮ ರಾಜ್ಯದಿಂದ ತಮಿಳುನಾಡು ರಾಜ್ಯಕ್ಕೆ ಹಣ್ಣು ತರಕಾರಿಗಳನ್ನು ಕಳುಹಿಸಿಕೊಡುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಇದ್ದಲ್ಲಿ ಯೋಜನೆಯ ವಿವರಗಳೇನು?

ಇ) ಹಣ್ಣು ಮತ್ತು ತರಕಾರಿಗಳನ್ನು ಕೆಡದಂತೆ ಶೇಖರಣೆ ಮಾಡಲು ಶೀತಲ ಗೃಹಗಳನ್ನು ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ?

ಈ) ಇದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು)

ಅ) ಹೌದು.

ಆ) ತಮಿಳುನಾಡು ಸರ್ಕಾರದ ಮತಿಯಿಂದ ತೆರೆಯಲಿರುವ ಮಾರಾಟ ಮಳಿಗೆಗಳ ಮೂಲಕ ರಾಜ್ಯದ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಯೋಜಿಸಲಾಗಿದೆ. ಈ ದಿಶೆಯಲ್ಲಿ ತಮಿಳುನಾಡು ಸರ್ಕಾರದ ಕೃಷಿ ಸಚಿವರೊಂದಿಗೆ ಮಾತುಕತೆ ನಡೆಸಿದ್ದು, ತಮಿಳುನಾಡು ಸರ್ಕಾರವು ತರಕಾರಿಯನ್ನು ಕೊಳ್ಳಲು ಒಪ್ಪಿರುತ್ತದೆ. ಇದರ ಜೊತೆಗೆ ಪ್ರಾಯೋಗಿಕವಾಗಿ ಮದ್ರಾಸ್ ನಗರದ ಕೇಂದ್ರ ರೈಲ್ವೆ ನಿಲ್ದಾಣದಲ್ಲಿ ಒಂದು ಮಾರಾಟ ಮಳಿಗೆಯನ್ನು ನೇರವಾಗಿ ತೆರೆಯಲು ಬಯಸಿದ್ದು, ಅದಕ್ಕಾಗಿ ಸ್ಥಳಾವಕಾಶ ಪಡೆಯಲು ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಗೆ ಕೋರಿಕೆ ಪತ್ರವನ್ನು ಬರೆಯಲಾಗಿದೆ.

ಇ) ಹೌದು

ಈ) ಹಣ್ಣು ಮತ್ತು ತರಕಾರಿಗಳನ್ನು ಕೆಡದಂತೆ ಶೇಖರಣೆ ಮಾಡಲು 336 ಲಕ್ಷ ರೂ.ಗಳ ವೆಚ್ಚದಲ್ಲಿ 3 ಶೀತಲ ಗೃಹಗಳನ್ನು (ಬಾಗಲಕೋಟೆ, ಬಿಜಾಪುರ ಮತ್ತು ಅಥಣಿ) ಸ್ಥಾಪಿಸಲು ಸ್ಥಳೀಯ ಸಹಕಾರ ಸಂಘಗಳಿಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಬೆಂಗಳೂರಿನ ಹಾಪ್‌ಕಾಮ್ಸ್ ಮತಿಯಿಂದ ಪ್ರಿಕೂಲಿಂಗ್ ಘಟಕಗಳು ಮತ್ತು ಶೈತ್ಯಾಗಾರಗಳನ್ನು ಧಾರವಾಡ, ಮೈಸೂರು, ಹಾಸನ, ಕೋಲಾರ, ಬೆಂಗಳೂರು (ಗ್ರಾಮಾಂತರ, ತುಮಕೂರು ಮತ್ತು ಕೋಲಾರ ಜಿಲ್ಲೆಯ ಶ್ರೀನಿವಾಸಪುರಗಳಲ್ಲಿ ಸ್ಥಾಪಿಸಲು ಇಲಾಖೆಯು ಪರಿಶೀಲಿಸುತ್ತಿದೆ.

ಬೆಂಗಳೂರಿನ ಕನ್ನಮಂಗಲದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅನುದಾನಗಳಲ್ಲಿ ಶೀತಲಗೃಹ, ಪ್ರಿ-ಕೂಲಿಂಗ್ ಘಟಕ, ಸಂಸ್ಕರಣ ಘಟಕ ಮತ್ತು ರಫ್ತು ಗೃಹಗಳನ್ನು ಸ್ಥಾಪಿಸಲಾಗುತ್ತಿದೆ. ಇದಕ್ಕೆ ತಗಲುವ ವೆಚ್ಚ ಸುಮಾರು 15 ಕೋಟಿ ರೂ.ಗಳು (ಐದು ವರ್ಷಗಳ ಅವಧಿಗೆ)

ಮಂಡ್ಯ ಮತ್ತು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಚೇಳೂರಿನಲ್ಲಿ ಶೀತಲ ಗೃಹಗಳನ್ನು ಸ್ಥಾಪಿಸಲು ಒಟ್ಟು 182.94 ಲಕ್ಷ ರೂ.ಗಳ ವೆಚ್ಚದ ಪ್ರಸ್ತಾವನೆಯನ್ನು ಸ್ಥಳೀಯ ಸಹಕಾರಿ ಸಂಘಗಳು ಸಲ್ಲಿಸಿರುತ್ತವೆ. ಈ ಎಲ್ಲಾ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ. ಇದಕ್ಕೆ ಒಟ್ಟು 1177.04 ಲಕ್ಷ ರೂ.ಗಳ ವೆಚ್ಚವಾಗುತ್ತಿದೆ. ಇದಲ್ಲದೆ 13 ಜಿಲ್ಲೆಗಳಲ್ಲಿ ಒಟ್ಟು 29 ಶೈತ್ಯಾಗಾರಗಳನ್ನು 2320.00 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲು ತೋಟಗಾರಿಕೆ ಇಲಾಖೆಯು ಯೋಜನೆಯನ್ನು ಸಿದ್ಧಪಡಿಸಿರುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ : ಸ್ವಾಮಿ, ನಮ್ಮ ರಾಜ್ಯದಿಂದ ತಮಿಳುನಾಡಿಗೆ ತರಕಾರಿಗಳನ್ನು ರವಾನೆ ಮಾಡುವುದಕ್ಕೆ ವಿಪ್ಪಾಡು ಮಾಡಿದ್ದೇವೆ ಎಂದು ಹೇಳಿದ್ದೀರಿ. ಬಹಳ ಸಂತೋಷ. ಇತ್ತೀಚೆಗೆ ಶೀತಲಾಗಾರ ಅಂದರೆ ಕೋಲ್ಡ್‌ಸ್ಟೋರೇಜ್ ಇಲ್ಲದೆ ಕೋಲಾದ ಜಿಲ್ಲೆಯ ರೈತರು ಸುಮಾರು 50 ಲಕ್ಷ, 1 ಕೋಟಿ ರೂಪಾಯಿಯವರೆಗೆ ಮಾಲನ್ನು ಆಂಧ್ರಪ್ರದೇಶದ ಪುಂಗನೂರು ಶೀತಲಾಗಾರದಲ್ಲಿ ಇಟ್ಟು ನಷ್ಟಮಾಡಿಕೊಂಡಿದ್ದಾರೆ. ಇದರ ಬಗ್ಗೆ ಲೇಟಿಸ್ಟ್‌ಪೊಸಿಷನ್ ಏನು ಎಂಬುದು ಮೊದಲನೆಯದು. ಎರಡನೆಯದು, ತಾವು ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದೀರಿ. ಮುಳಬಾಗಿಲು, ಚಿಂತಾಮಣಿಯಲ್ಲಿ ಸುಮಾರು ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಶೀತಲಗೃಹವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಅದು ಇದರಲ್ಲಿಲ್ಲ. ಅದನ್ನು ಕೈಬಿಟ್ಟಿದ್ದೀರಾ? ಅಥವಾ ಅದನ್ನು ದಯವಿಟ್ಟು ಮಾಡಿಕೊಡುತ್ತೀರಾ ಹೇಳಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ಸಂಸ್ಕರಣ ಶೀತಲಗೃಹಗಳು ಇಲ್ಲದ ಕಾರಣ ಆಂಧ್ರಪ್ರದೇಶದಲ್ಲಿ ಹೋಗಿ ನಮ್ಮ ರೈತರು ದಾಸ್ತಾನು ಮಾಡಿದ್ದುದು ನಿಜ. ಇದರಿಂದ ಸುಮಾರು 46 ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ನಾವು ಮತ್ತು ನಮ್ಮ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ವಿಚಾರವನ್ನು ಮನಗಂಡಾಗ ನಮಗೂ ಅನ್ನಿಸಿತು ನಷ್ಟಕ್ಕೆ ಗುರಿಯಾಗಿದ್ದಾರೆ ಎಂದು. ಈಗಾಗಲೇ ಶಾಸನಸಭಾಸದಸ್ಯರ ಸಮಿತಿ ಮಾಡಿ ಆ ಹಣವನ್ನು ನಷ್ಟವಾದ ರೈತರಿಗೆ ಕೊಡಬೇಕೆಂದು ಕರ್ನಾಟಕ ಸರ್ಕಾರ ತೀರ್ಮಾನ ಮಾಡಿದೆ. ಅದರಂತೆ 46 ಲಕ್ಷ ರೂಪಾಯಿಗಳನ್ನು ರೈತರಿಗೆ ಪರಿಹಾರವಾಗಿ ಕೊಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಆ ಹಣವನ್ನು ಈ ತಿಂಗಳ ಕೊನೆಯಲ್ಲಿ ಬಿಡುಗಡೆ ಮಾಡಲಿಕ್ಕೆ ಸರ್ಕಾರ ಎಲ್ಲಾ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ. ಶೀತಲಗೃಹ ಕೊಡುವ ಬಗ್ಗೆ ಹೇಳಿಕೆ ಮಾಡಿರುವುದು ನಿಜ. ಕೋಲಾರ ಜಿಲ್ಲೆ ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ, ಹಿಂದುಳಿದ ಜಿಲ್ಲೆಯಾಗಿರುವುದರಿಂದ ಮೂರು ಸ್ಥಳದಲ್ಲಿ ಶೀತಲಗೃಹ ಕೊಡುವುದಕ್ಕೆ ಸರ್ಕಾರ ಈಗಾಗಲೇ ಕಾರ್ಯಕ್ರಮ ಹಮ್ಮಿಕೊಂಡಿದೆ. ಮೊದಲನೆಯದು ಮುಳಬಾಗಿಲು, ಎರಡನೆಯದು ಚಿಂತಾಮಣಿ, ಮೂರನೆಯದು ಶ್ರೀನಿವಾಸಪುರ. ಈ ಮೂರು ಜಾಗಗಳಿಗೆ ಶೀತಲಗೃಹವನ್ನು ಕೊಡುವುದಕ್ಕೆ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀನಿವಾಸಪುರಕ್ಕೆ ಸಂಬಂಧಪಟ್ಟ ಹಾಗೆ ಕೋ-ಆಪರೇಟಿವ್ ಇನ್ಸ್‌ಟ್ಯೂಟ್ ಮುಖೇನ ಹಣವನ್ನು ಕೂಡ ನಿಗದಿ ಮಾಡಿದ್ದೇವೆ. 76 ಲಕ್ಷದ 85 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಒಂದು ಶೀತಲಗೃಹವನ್ನು ಅಲ್ಲಿಗೆ ಕೊಟ್ಟಿದ್ದೇವೆ. ಮುಳಬಾಗಿಲು, ಚಿಂತಾಮಣಿ ಬಗ್ಗೆ ಅಂದಾಜಿನ ಸಂಪೂರ್ಣವಾದ ತಜ್ಞರ ರಿಪೋರ್ಟ್ ನಮಗೆ ಬಂದಿಲ್ಲ ಆದ್ದರಿಂದ ಹಣವನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ಆ ಜಾಗಗಳಿಗೆ ಕೊಟ್ಟಿದ್ದಾರೆ. ಎಷ್ಟು ಟನ್‌ಗಳ

ಶೀತಲಗೃಹಗಳು ಬೇಕೆಂದು ತೀರ್ಮಾನಮಾಡಿ ಅಲ್ಲಿಗೆ ಕೊಡುವಂತಹ ಪ್ರಕ್ರಿಯೆ ಸರ್ಕಾರದ ಮುಂದಿದೆಯೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಎಷ್ಟು ಭೂಮಿ ಬೇಕಾಗಿದೆ, ಎಷ್ಟು ಬೇಗನೆ ಮಾಡುತ್ತೀರಿ?

ಶ್ರೀ ಎ. ಕೃಷ್ಣಪ್ಪ : ಮಾನ್ಯ ಸದಸ್ಯರ ಜೊತೆ ನಾನು ಮುಳಬಾಗಿಲಿಗೆ ಹೋದಾಗ ಮಾತನಾಡಿದ್ದೇನೆ. ಸಂಬಂಧಪಟ್ಟ ಜಾಗದ ಬಗ್ಗೆ ಕೇಳಿಕೊಂಡಿದ್ದೇನೆ, ಆ ಜಾಗದ ರೆಕಾರ್ಡ್‌ಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದಷ್ಟುಬೇಗ ಸೆಂಟ್ರಲ್ ವೇರಹೌಸಿಂಗ್‌ನವರು ಎರಡು ಶೀತಲಗೃಹಗಳನ್ನು ಕಟ್ಟಬೇಕು. ಒಂದು ಮುಳಬಾಗಿಲು ಮತ್ತೊಂದು ಶ್ರೀನಿವಾಸಪುರ. ಮೂರನೆಯವಾರ ಅಂತ್ಯವಾಗುವ ಸಂದರ್ಭಕ್ಕೆ ಅವರು ಕೂಡ ನಮ್ಮ ಜೊತೆ ಮಾತುಕತೆಯನ್ನು ಮಾಡಬೇಕಾಗಿತ್ತು. ಕಡೆಯ ವಾರದಲ್ಲಿ ಅಧಿಕಾರಿಗಳ ಸಮೇತ ತಾಲ್ಲೂಕಿನ ಶಾಸಕರನ್ನು ಕರೆಸುತ್ತೇನೆ. ಈ ವಿಚಾರವನ್ನು ನಾನು ಮುಂಚಿತವಾಗಿ ತಿಳಿಸುತ್ತೇನೆ.

ಪ್ರಾಥಮಿಕ ಸಹಕಾರಿ ಸಂಘಗಳ ನೌಕರರಿಗೆ ವೇತನ ಶ್ರೇಣಿ

313-ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರಾಥಮಿಕ ಸಹಕಾರ ಸಂಘಗಳ ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿಗೆ ಸರಿಯಾದ ವೇತನ ಶ್ರೇಣಿ ಇಲ್ಲದೆ ವಂಚಿತರಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರಿ ನೌಕರರಿಗೆ ಇರುವ ಸಂಬಳ ಹಾಗೂ ಸೇವಾ ಸೌಲಭ್ಯಗಳನ್ನು ಪ್ರಾಥಮಿಕ ಸಹಕಾರ ಪತ್ತಿನ ವ್ಯವಸಾಯ ಸೇವಾ ಸಹಕಾರ ಸಂಘಗಳ ಕಾರ್ಯದರ್ಶಿಗಳಿಗೆ ದೊರಕಿಸಿಕೊಡಲು ಸರ್ಕಾರ ಯೋಚಿಸಿದೆಯೇ?

ಇ) ಈ ವಿಷಯದಲ್ಲಿ ಸರ್ಕಾರ ಕ್ರಮ ಕೈಗೊಂಡಿದೆಯೇ ಹಾಗೂ ಸರ್ಕಾರದ ನೀತಿ ಏನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಹೌದು

ಆ) ಇಲ್ಲ

ಇ) ಈ ಬಗ್ಗೆ ವಿವರವಾಗಿ ಅಧ್ಯಯನ ನಡೆಸಿ ಶಿಫಾರಸ್ಸು ಮಾಡಲು ಸರ್ಕಾರ ಸಮಿತಿಗಳನ್ನು ನೇಮಿಸಿ ವರದಿ ಪಡೆದು ಸಮಿತಿಗಳ ಶಿಫಾರಸ್ಸಿನ ಪ್ರಕಾರ ಪ್ರಾಥಮಿಕ ಸಹಕಾರ ಸಂಘಗಳ ಕಾರ್ಯದರ್ಶಿಗಳು ಹಾಗೂ ಸಿಬ್ಬಂದಿಗಳ ವೇತನ ಶ್ರೇಣಿಯನ್ನು ನಿಗಧಿಗೊಳಿಸಿರುತ್ತದೆ. ಸಹಕಾರ ಸಂಘಗಳ ಸಾಂಪತ್ತಿಕ ಸ್ಥಿತಿಗೊಳಪಟ್ಟು ಸಿಬ್ಬಂದಿಯ ವೇತನ ಶ್ರೇಣಿಯನ್ನು ನಿಗಧಿಗೊಳಿಸಬೇಕೆಂಬುದು ಸರ್ಕಾರದ ನೀತಿಯಾಗಿರುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ರಾಜ್ಯದ ಪ್ರಾಥಮಿಕ ಸಹಕಾರಸಂಘಗಳ ಕಾರ್ಯದರ್ಶಿ ಮತ್ತು ಸಿಬ್ಬಂದಿಗೆ ಸರಿಯಾದ ವೇತನಶ್ರೇಣಿ ಇಲ್ಲದೆ ವಂಚಿತರಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಮಾನ್ಯ ಸಹಕಾರ ಸಚಿವರು "ಹೌದು" ಎಂದು ಹೇಳುತ್ತಿದ್ದಾರೆ. ಅವರಿಗೆ ಸರ್ಕಾರಿ ನೌಕರರಿಗೆ ಇರುವ ಸಂಬಳ ಹಾಗೂ ಸೇವಾಸೌಲಭ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆಯೇ ಅಂದರೆ "ಇಲ್ಲ"ವೆಂದು ಹೇಳುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಸಂಘಗಳು ಅಂದರೆ ಹಾಲು ಉತ್ಪಾದಕರ ಸಹಕಾರಸಂಘ, ಪತ್ತಿನ ವ್ಯವಸಾಯ ಸೇವಾ ಸಹಕಾರಸಂಘ, ಎಣ್ಣೆಕಾಳುಗಳ ಸಹಕಾರಸಂಘಗಳು ಇವತ್ತು